**PW**-2

(ಇಂದು ದಿನಾಂಕಃ 15-07-2025 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು - ಆರೋಪಿ ಪರ ಶ್ರೀ ಎಂ.ಜಿ.ಎಸ್ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಹಾಜರು ಪಡಿಸಿದ ದಾಖಲಾತಿಗಳ ಬಗ್ಗೆ ತಿಳುವಳಿಕೆ ಇರುತ್ತದೆ. ಈ ಸಾಲದ ವ್ಯವಹಾರ ನಡೆಯುವ ಸಂದರ್ಭದಲ್ಲಿ ನಾನು ಪಿರ್ಯಾದು ಸಂಸ್ಥೆಯ ಕುಮಟಾ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ನಿಪಿ-2 ಚೆಕ್ ನ್ನು ನಾನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸರಿ. ನಿಪಿ-2(ಎ) ಮತ್ತು ಆರೋಪಿತನ ಮಾದರಿ ಸಹಿಗಳನ್ನು ನಾನು ಹೋಲಿಕೆ ಮಾಡಿಲ್ಲ ಎಂದರೆ ಸರಿ. ನಮ್ಮ ಪಿರ್ಯಾದು ಸಂಸ್ದೆಯು ಸಹಕಾರಿ ಕಾಯ್ದಿಯಡಿ ನೋಂದಣಿಯಾದ ಸಂಸ್ಥೆ ಎಂದರೆ ಸರಿ. ನಮ್ಮ ಪಿರ್ಯಾದು ಸಂಸ್ದೆಯು ಅಪೇಕ್ಸ ಬ್ಯಾಂಕ್, ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಹಾಗೂ ರಾಜ್ಯ ಸರಕಾರದ ನಿಯಮವಾಳಿಗಳಿಗೆ ಅನುಸಾರವಾಗಿ ಕಾರ್ಯ ನಿರ್ವಹಿಸುತ್ತದೆ ಎಂದರೆ ಸರಿ. ನಿಪಿ-13ರಲ್ಲಿ ಈ ಪ್ರಕರಣವನ್ನು ನಡೆಸಲು ಅಧಿಕಾರ ಕೊಟ್ಟಿರುವ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ನಾನು ನಿಪಿ-13ನ್ನು ಓದಿಕೊಂಡಿರುತ್ತೇನೆ ಎಂದರೆ ಸರಿ. ನಿಪಿ-13ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಬಾಕಿ ಇರುವ ಪ್ರಕರಣಗಳನ್ನು ನಡೆಸಲು ಅಧಿಕಾರ ನೀಡಿರುವ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ನನಗೆ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಅಧಿಕಾರವಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಪಿರ್ಯಾದು ಸಂಸ್ಥೆಯು ಒಟ್ಟು 12 ಶಾಖೆಗಳು ಇರುತ್ತವೆ. ಪ್ರತಿಯೊಂದು ಶಾಖೆಯಲ್ಲಿ ಪ್ರತ್ಯೇಕ ವ್ಯವಸ್ಥಾಪಕರು ಇರುತ್ತಾರೆ ಎಂದರೆ ಸರಿ. 2023ನೇ ಇಸವಿಯಲ್ಲಿ ಪಿರ್ಯಾದು ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸಲು ಬಂದಿರುತ್ತೇನೆ. ಪ್ರತಿಯೊಂದು ಶಾಖಾ ಪ್ರಬಂಧ ಅಧಿಕಾರಿಗಳಿಗೆ ಅವರ ಅವಧಿಯಲ್ಲಿ ಇರುವ ಎಲ್ಲಾ ಖಾತೆಗಳ ಸಂಪೂರ್ಣ ಮಾಹಿತಿ ಇರುತ್ತದೆ ಹಾಗೂ ಜವಾಬ್ದಾರರಾಗಿರುತ್ತಾರೆ ಎಂದರೆ ಸರಿ. 2022ನೇ ಇಸವಿಯಲ್ಲಿ ಪಿರ್ಯಾದು ಸಂಸ್ಥೆಯ ಗೋಕರ್ಣ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದರೆ ಸರಿ. ಒಂದು ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅವಧಿಯಲ್ಲಿ ಮತ್ತೊಂದು ಶಾಖೆಯ ನಿಯಂತ್ರಣ ನಮ್ಮ ಬಳಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ನಿಪಿ-13ನ್ನು ತೋರಿಸಲಾಗಿ ಅದರಲ್ಲಿ

**PW**-2

ಅಧಿಕಾರ ನೀಡಿದ ದಿನಾಂಕಃ13-12-2022 ಎಂದು ನಮೂದಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರಿದು ನಾನು ಪಿರ್ಯಾದು ಸಂಸ್ಥೆಯ ಯಾವುದೇ ಶಾಖೆಗೂ ವರ್ಗಾವಣೆ ಆದರೂ ನಿಪಿ-13 ಅಧಿಕಾರ ಪತ್ರ ಅನ್ವಯವಾಗುತ್ತದೆ ಎಂದು ನುಡಿದಿರುತ್ತಾರೆ. ನಿಪಿ-13ನ್ನು ಹೊರತು ಪಡಿಸಿ ಪ್ರಕರಣವನ್ನು ನಡೆಸಲು ಪಿರ್ಯಾದು ಸಂಸ್ಥೆಯು ಬೇರೆ ಯಾವುದೇ ಅಧಿಕಾರ ಪತ್ರವನ್ನು ನೀಡಿದ್ದು ಇರುವುದಿಲ್ಲ. ಈ ಪ್ರಕರಣದಲ್ಲಿ ಸಾಲಗಾರರು ಯಾವ ಇಸವಿಯಲ್ಲಿ ನಮ್ಮ ಸಂಸ್ಥೆಯ ಶೇರ್ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ಪಿರ್ಯಾದು ಸಂಸ್ಥೆಯಲ್ಲಿ 'ಅ' ಮತ್ತು 'ಡ' ವರ್ಗದ ಶೇರ್ ಸದಸ್ಯತ್ವ ಇದೆ. ಈ ಪ್ರಕರಣದ ಸಾಲಗಾರರು 'ಡ' ವರ್ಗದ ಸದಸ್ಯತ್ವ ಹೊಂದಿರುತ್ತಾರೆ. ನಮ್ಮ ಸಂಸ್ಥೆಯ ಆಡಳಿತ ಮಂಡಳಿಯವರು ಸಾಲವನ್ನು ಮಂಜೂರು ಮಾಡುತ್ತಾರೆ. ಕೆಲವೊಂದು ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಸ್ಥಳೀಯ ಬ್ಯಾಂಕಿನಲ್ಲಿ ಎನ್.ಡಿ.ಸಿ (No Due Certificate) ನ್ನು ಪಡೆದುಕೊಂಡಿರುತ್ತೇವೆ. ಸಾಕ್ಷಿಯು ಮುಂದುವರಿದು ಎನ್.ಡಿ.ಸಿ (No Due Certificate) ಕಡ್ಡಾಯ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ಸಂಸ್ಥೆಯಲ್ಲಿ ವಿವಿಧ ಸಾಲಕ್ಕೆ ವಿವಿಧ ಬಡ್ಡಿ ದರವನ್ನು ಹಾಕುತ್ತೇವೆ ಎಂದರೆ ಸರಿ. 2020ನೇ ಇಸವಿಯಲ್ಲಿ ಪಿರ್ಯಾದು ಬ್ಯಾಂಕಿನ ಸಾಲದ ಬಡ್ಡಿ ದರದ ಚಾರ್ಟನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಿರಾ ಎಂದರೆ ಸಾಕ್ಷಿಯು ಚೆಕ್ ಬೌನ್ಸ ಪ್ರಕರಣಕ್ಕೆ ಬೇಕಾದ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನಮ್ಮ ಪಿರ್ಯಾದು ಸಂಸ್ಥೆಯು ಈ ಪ್ರಕರಣದಲ್ಲಿ ಎಷ್ಟು ದಾಖಲೆಗಳನ್ನು ಹಾಜರು ಪಡಿಸಬೇಕೆಂದು ನನಗೆ ಲಿಖಿತವಾಗಿ ತಿಳಿಸಿದ್ದು ಇರುವುದಿಲ್ಲ. ಚೆಕ್ ಅಮಾನ್ಯ ಪ್ರಕರಣಗಳಲ್ಲಿ ಯಾವ ದಾಖಲೆಗಳನ್ನು ಹಾಜರು ಪಡಿಸಬೇಕೆಂದು ಉಲ್ಲೇಖ ಇರುವುದಿಲ್ಲ ಎಂಬ ತಿಳುವಳಿಕೆ ಇರುತ್ತದೆ ಎಂದರೆ ಸರಿ. ನಾನು ಪಿರ್ಯಾದು ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸಲು ಬಂದಾಗ ಚೆಕ್ ಅಮಾನ್ಯ ಪ್ರಕರಣಗಳು ಎಷ್ಟು ಬಾಕಿ ಇತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿದಿರುತ್ತಾರೆ. ನನಗೆ ಈ ಪ್ರಕರಣದ ವೈಯಕ್ತಿಕ ಮಾಹಿತಿ ಇರುವುದಿಲ್ಲ

**PW**-2

ಎಂದರೆ ಸಾಕ್ಷಿಯು ನಮ್ಮ ಹಿಂದಿನ ವ್ಯವಸ್ಥಾಪಕರಿಂದ ಮಾಹಿತಿಯನ್ನು ತಿಳಿದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ